ವಿಕ್ಟೋರಿಯ ಆಸ್ಪತ್ರೆಯ ಸುತ್ತ ಅಂಗಡಿಗಳು ಇದೆಯಲ್ಲ, ಆ ಅಂಗಡಿಗಳು ಸಹ ನಿಮ್ಮ ಆಸ್ತಿಯನ್ನು ಮುಚ್ಚಿಕೊಂಡಿವೆ. ಎಲ್ಲ ದ್ವಾರಗಳನ್ನು ಮುಚ್ಚಿರತಕ್ಕಂಥ ಒಂದು ಕೆಟ್ಟ ಅಂಗಡಿಗಳ ಸಾಲು ಅಲ್ಲಿ ಇದೆ. ಅದನ್ನು ತೆಗೆಯಿಸುವುದಕ್ಕೆ ಸರ್ಕಾರ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಇವತ್ತು ಅಲ್ಲಿ ಹಲ್ಲಿನ ತಜ್ಞರ ಆಸ್ಪತ್ರೆ ಇದೆ. ಒಳಗಡೆ ಪ್ರಮುಖವಾದ ಅನೇಕ ವಿಧವಾದ ಆಸ್ಪತ್ರೆಗಳು ಇರುವಾಗ ಈ ರೀತಿಯಾಗಿ ಕಲುಷಿತವಾದಂಥ ವಾತಾವರಣ ನಿರ್ಮಾಣ ಮಾಡತಕ್ಕಂಥ ಅಂಗಡಿ ಷೆಡ್‌ಗಳು ಏನಿವೆ ಇದು ಯಾರದೋ ಉದ್ಧಾರಕ್ಕೆ, ಯಾರದೋ ವ್ಯಾಪಾರಕ್ಕೆ, ಯಾರೋ ಒಬ್ಬ ದಲ್ಲಾಳಿಗಳ ವ್ಯಾಪಾರ ಕ್ಕೋಸ್ಕರವಾಗಿ ಅಲ್ಲಿ ಇರುವುದಾಗಿದ್ದರೆ, ಕಾನೂನಾದರೂ ತಂದು ಅವನ್ನು ಹೊರಗೆ ಹಾಕಿ. ಈಗ ಒಂದೇ ಒಂದು ಮುಖ್ಯದ್ವಾರ ಕೋಟೆ ಪಕ್ಕದಲ್ಲಿ ಇದೆಯಲ್ಲ, ಅದು ಮುಖ್ಯದ್ವಾರ ಎಂದು ನಿರ್ಧಾರ ಮಾಡಿಲ್ಲ, ಅಲ್ಲಿ ಒಂದು ಬಾಗಿಲು ಇದೆ. ಆದರೆ ಈ ಕಡೆನೂ ಒಂದು ಬಾಗಿಲು ತೆಗೆಯಿರಿ. ತಪ್ಪೇನೂ ಆಗುವುದಿಲ್ಲ. ಪ್ರತಿದಿನ ಸಾಮಾನ್ಯ ಜನ ತಕ್ಷಣ ಬ್ರೆಡ್ ತೆಗೆದುಕೊಂಡು ಹೋಗತಕ್ಕವರು, ಟೀ ತೆಗೆದು ಕೊಂಡು ಹೋಗುವುದಕ್ಕೆ ಬರತಕ್ಕವರು, ಔಷಧಿ ತೆಗೆದುಕೊಂಡು ಹೋಗುವುದಕ್ಕೆ ಬರತಕ್ಕವರಿಗೆ ಅನುಕೂಲವಾಗತಕ್ಕಂಥ ವ್ಯವಸ್ಥೆ ಇದೆ. ಕೋಟೆಯ ಒಳಗಡೆ ನಾಲ್ಕೈದು ವಿವಿಧ ಆಸ್ಪತ್ರೆಗಳಿವೆ. ನೀವು ಒಂದೇ ಕಡೆಯಿಂದ ನುಗ್ಗಬೇಕು ಅಂದರೆ ಕಷ್ಟವಾಗುತ್ತದೆ. ಒಂದೇ ಕಡೆಯಿಂದ ನುಗ್ಗಬೇಕಾದರೆ ಅಲ್ಲಿ ರಸ್ತೆ ದಾಟಬೇಕಾದರೆ ಎಷ್ಟು ಬಸ್ಸಿನ ಸಂಚಾರ ಇದೆ ಎನ್ನುವಂಥಾದ್ದನ್ನು ತಾವು ನೋಡಬೇಕು. ಆದ್ದರಿಂದ ಈ ಬಾಗಿಲನ್ನು ತೆಗೆಯಿರಿ. ಈ ಒಂದು ಬಾಗಿಲು ಬಗ್ಗೆ ೩-೪ ಜನ ಪ್ರಯತ್ನ ಪಡುತ್ತಿದ್ದಾರೆ ಎಂದು ಅಲ್ಲ. ಈ ಬಾಗಿಲಿನಿಂದ ಲಕ್ಷೋಪಂತರ ಜನತೆಗೆ ಬಹಳ ತೊಂದರೆಯಾಗುತ್ತಿದೆ. ಆದುದರಿಂದ ದಯಮಾಡಿ ಈ ಕಡೆ ಬಾಗಿಲು ತೆಗೆಸತಕ್ಕಂಥಾದ್ದು ಒಂದು. ಎರಡನೆಯದು, ಯಾವುದೇ ಕಾರಣದಿಂದಲೂ ಅಂಗಡಿಗಳು ಅಲ್ಲಿ ಇರಬಾರದು. ಇದಕ್ಕೆ ಈ ಸಭೆಯಿಂದ ಎಲ್ಲ ರೀತಿಯಿಂದ ಬೆಂಬಲ ಕೊಡುತ್ತೇವೆ. ದಯಮಾಡಿ ಯಾರೇ ಆಗಿರಬಹುದು, ಎಷ್ಟೇ ಪ್ರಭಾವಯುತ ವ್ಯಕ್ತಿಗಳಾಗಿರಲಿ, ಅಲ್ಲಿರುವ ಅಂಗಡಿಗಳು ಹೊರಗೆ ಹೋಗಲೇಬೇಕು. ಇಲ್ಲದೇಹೋದರೆ ಅದು ಆಸ್ಪತ್ರೆ ಎಂದು ಅನಿಸಿ ಕೊಳ್ಳುವುದಿಲ್ಲ. ಆಸ್ಪತ್ರೆ ಒಳಗಿರುವ ವಿಚಾರವನ್ನು ನಾವು ಆಮೇಲೆ ನಿಮ್ಮ ಇಲಾಖೆಯ ಬೇಡಿಕೆ ಬಂದಾಗ ಪ್ರಾತಿನಾಡುತ್ತೇವೆ. ಇವತ್ತು ದಯಮಾಡಿ ಈ ಪ್ರಶ್ನೆಯನ್ನು ಬಗೆಹರಿಸಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಸಭಾಧ್ಯಕ್ಷರೆ, ಮುಚ್ಚಿದ ಬಾಗಿಲನ್ನು ತೆಗೆಯಬೇಕು ಎಂದು ಹೇಳಿದ್ದಾರೆ, ಮುಖ್ಯ ದ್ವಾರ ಮುಚ್ಚಬಾರದು ಎಂದು ಹೇಳಿದ್ದಾರೆ. ನಾನು ಆಗಲೇ ಹೇಳಿದ ಹಾಗೆ, ನರ್ಸಸ್ ಕ್ವಾರ್ಟರ್ಸ್ ಏನಿದೆ. ಆ ಕಡೆ ವಿಕೆಟ್ ಗೇಟ್ ಓಪನ್ ಮಾಡುವಂಥಾದ್ದು ನಿಜವಾಗಿ ಆಗತ್ಯ ಉಂಟು. ಮತ್ತು ಅಂಗಡಿ ಬಗ್ಗೆ ತಾವು ಏನು ಹೇಳಿದ್ದೀರಿ ಅದರ ಬಗ್ಗೆ ನಮ್ಮ ಬೇಡಿಕೆ ಬಂದಾಗ ತಾವು ಪ್ರಾತನಾಡಿ, ಅದಕ್ಕೆ ಸೂಕ್ತವಾದಂಥ ಉತ್ತರವನ್ನು ನಾನು ಕೊಡುತ್ತೇನೆ.

೩) ವೈದ್ಯಕೀಯ ಕಾಲೇಜುಗಳು ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುವ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ವೈದ್ಯಕೀಯ ಕಾಲೇಜುಗಳು ವಸೂಲಿ ಮಾಡುತ್ತಿರುವ ಕ್ಯಾಪಿಟೇಷನ್ ಶುಲ್ಕವನ್ನು ನಿಲ್ಲಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವರು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ.

ಕರ್ನಾಟಕ ವಿದ್ಯಾ ಸಂಸ್ಥೆಗಳ (ಕ್ಯಾಪಿಟೇಶನ್ ಶುಲ್ಕ ನಿಷೇಧ) ಕಾನೂನು ೧೯೮೯ರ ೩ನೇ ವಿಧಿಯ ಪ್ರಕಾರ ವೈದ್ಯಕೀಯ ಮತ್ತು ಇಂಜನಿಯರಿಂಗ್ ಕಾಲೇಜುಗಳು ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುವುದನ್ನು ನಿಷೇಧಿಸಲಾಗಿದೆ. ಈ ವಿಧಿ ಜುಲೈ ೧೧, ೧೯೮೯ರಿಂದ ಜಾರಿಯಲ್ಲಿ ಬಂದಿದ್ದು ಇದೇ ವಿಧಿಯಲ್ಲಿ ೧೯೮೯ರವರೆಗೆ ಕೊಡಲಾದ ಕೆಲವು ರಿಯಾಯಿತಿಗಳನ್ನು ಹೊರತುಪಡಿಸಿ ಕ್ಯಾಪಿಟೇಷನ್ ಶುಲ್ಕ ವಸೂಲು ಮಾಡುವುದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಈ ವಿಧಿಯನ್ನು ಉಲ್ಲಂಘಿಸಿದವರಿಗೆ ಇದೇ ಕಾನೂನಿನ ೭ನೇ ವಿಧಿ ಪ್ರಕಾರ ೩ ವರ್ಷಕ್ಕಿಂತ ಕಡಿಮೆಯಿಲ್ಲದಂತೆ ಸೆರೆವಾಸ ವಾಸ ಮತ್ತು ೫ ಸಾವಿರ ರೂಪಾಯಿವರೆಗೆ ದಂಡ ವಿಧಿಸಬಹುದು. ಈ ಕಾನೂನು ಜಾರಿಗೆ ಬಂದ ನಂತರ ಖಾಸಗಿ ವಿದ್ಯಾಲಯಗಳ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಅವುಗಳು ವಸೂಲು ಮಾಡ ಬಹುದಾದ ವಿದ್ಯಾ ಶುಲ್ಕವನ್ನು ಜೂನ್ ೫, ೧೯೮೯ರಂದು ನಿಗದಿಪಡಿಸಲಾಗಿದೆ.

ಆದರೂ ಕ್ಯಾಪಿಟೇಶನ್ ಶುಲ್ಕ ವಿಷಯ ಮತ್ತು ವಿದ್ಯಾ ಶುಲ್ಕ ಪರಿಷ್ಕರಣೆ ವಿಷಯಂಗಳನ್ನು ಪರಿಶೀಲಿಸಲು ಸರ್ಕಾರ ಇತ್ತೀಚೆಗೆ ಸಂಪುಟದ ಉಪ ಸಮಿತಿಯೊಂದನ್ನು ನಿಯಮಿಸಿದ್ದು ಈ ಎಲ್ಲಾ ವಿಚಾರಗಳು ಈ ಸಮಿತಿಯ ಪರಿಶೀಲನೆಯಲ್ಲಿವೆ.

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಇದೊಂದು ವಿಪರ್ಯಾಸ. ಮಾನ್ಯ ಆರೋಗ್ಯ ಸಚಿವರು, ಈ ಬಗ್ಗೆ ಮೂರು ವರ್ಷ ಜೈಲು, ಹತ್ತು ಸಾವಿರ ದಂಡ ಸಾಮಾನ್ಯ ಕಾನೂನು ಮಾಡಿದ್ದೇವೆ ಎಂದು ಹೇಳಿದರು. ತಾವು ಪ್ರಾಮಾಣಿಕವಾಗಿ ಹೃದಯ ಬಿಚ್ಚಿ ಮಾತನಾಡುವುದಾದರೆ ಈ ರಾಜ್ಯದಲ್ಲಿರತಕ್ಕ ಎಲ್ಲಾ ವೈದ್ಯಕೀಯ ಕಾಲೇಜುಗಳ ವ್ಯವಸ್ಥಾಪಕರನ್ನು ಈ ಕಾಯಿದೆ ಅಡಿಯಲ್ಲಿ ಇವತ್ತೇ ಈ ಕ್ಷಣದಿಂದಲೇ ಬಂಧಿಸಬಹುದು. ಈ ಸರ್ಕಾರದವರು ಏನಾದರು ಆತ್ಮಶೋಧನೆ ಮಾಡಿಕೊಳ್ಳುವುದಾದರೆ, ತಮಗೇ ನಾಚಿಕೆಯಾಗುತ್ತದೆ. ಏಕೆಂದರೆ ಅವರು ಬದುಕಿರುವುದೇ ಕ್ಯಾಪಿಟೇಷನ್ ಶುಲ್ಕದಿಂದ ಹಿಂದೆ ರಾಜ ಮಹಾರಾಜರುಗಳು ಸ್ವಾತಂತ್ರ್ಯ ಪೂರ್ವದಲ್ಲಿ ಹೋದರು. ಇಂದು ಈ ವೈದ್ಯ ಕಾಲೇಜುಗಳನ್ನು ನಡೆಸತಕ್ಕವರೇ ರಾಜ ಮಹಾರಾಜರುಗಳು ಪಾಳೇಗಾರರುಗಳಾಗಿದ್ದಾರೆ. ಅವರು ಧರ್ಮ ಪೀಠಾಧಿಪತಿಗಳಾಗಿರಬಹುದು ಉನ್ನತವಾದ ವ್ಯಕ್ತಿಗಳು ಆಗಿರಬಹುದು. ಈ ಶಾಸನ ಸಭೆಯ ಶಾಸಕರುಗಳು ಆಗಿರಬಹುದು. ತಾವು ಈ ರೀತಿ ಉತ್ತರ ಕೊಟ್ಟು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇವತ್ತು ಒಂದು ಸೀಟಿಗೆ ೫ ಲಕ್ಷ, ಮೂರು ಲಕ್ಷ, ಎರಡು ಲಕ್ಷದಂತೆ ಮಾರಾಟವಾಗುತ್ತಿದೆ. ಇದರ ಬಗ್ಗೆ ನೀವು ಸಮರ್ಥವಾದಂಥ ತನಿಖೆ ಕೂಡಲೇ ಮಾಡಿಸುತ್ತೀರಾ? ಆ ಒಂದು ಶಕ್ತಿ ನಿಮ್ಮ ಸರ್ಕಾರದಲ್ಲಿ ಇರುವುದಾದರೆ ತಮಗೆ ನಾನು ವಿವರ ಕೊಡುತ್ತೇನೆ. ಎಷ್ಟು ಜನಕ್ಕೆ ವೈದ್ಯಕೀಯ ಕಾಲೇಜುಗಳನ್ನು ಕೊಟ್ಟಿದ್ದೀರಿ. ಯಾವ ಯಾವ ಸರ್ಕಾರದಲ್ಲಿ ಎಷ್ಟೆಷ್ಟು ಕಾಲೇಜುಗಳಿಗೆ ಅನುಮತಿ ಕೊಟ್ಟಿದ್ದಾರೆ. ನೀವು ಯಾವುದೇ ರೀತಿ ಕಾಯಿದೆ ಮಾಡಿದರೂ ಅದಕ್ಕೆ ಹೊಂದಿಕೊಂಡು ಪೇಮೆಂಟ್ ಆಗುತ್ತಾರೆ. ನೀವು ೫ ಸಾವಿರ ದಂಡ ಹಾಕಿದರೆ, ಅವರು ಸಾರ್ವಜನಿಕರಿಗೆ ೫ ಲಕ್ಷ, ಮೂರು ಲಕ್ಷ ಹೀಗೆ ದಂಡ ಹಾಕುತ್ತಿದ್ದಾರೆ. ಇವತ್ತು ಅಖಿಲ ಭಾರತ ವೈದ್ಯಕೀಯ ಕೌನ್ಸಿಲ್‌ನ ಮಾನ್ಯತೆ ಸಿಗದೇ ಇದ್ದರೂ ಇವತ್ತು ನಾವು ಕೊಡಿಗಳಂತೆ ಈ ಕಾಲೇಜುಗಳು ಬೆಳೆಯುತ್ತಿವೆ. ಇಂಥ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಕರ್ನಾಟಕ ಬಿಟ್ಟರೆ ಬೇರೆ ಕಡೆ ಕೆಲಸ ಸಿಗುವುದಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಈ ಕ್ಯಾಪಿಟೇಷನ್ ಒಂದು ರೀತಿಯ ಪ್ಲೇಗ್, ಕಾಲರಾದಂತೆ ಹುಟ್ಟಿಕೊಂಡಿರುವುದನ್ನು ತಡೆಗಟ್ಟುವ ಕೆಲಸವನ್ನು ನಾನು ನಿಮ್ಮ ಒಬ್ಬರಿಂದ ನಿರೀಕ್ಷೆ ಮಾಡುವುದಿಲ್ಲ ಸರ್ಕಾರವೇ ಇದನ್ನು ತೀರ್ಮಾನ ಮಾಡಬೇಕು. ನಿಮ್ಮ ಸರ್ಕಾರ ಬಂದ ಹೊಸದರಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ರದ್ದು ಮಾಡುತ್ತೇವೆಂದು ಹೇಳಿದ್ದಿರಿ. ಮತ್ತೆ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿರುವ ಕ್ಯಾಪಿಟೇಷನ್ ಶುಲ್ಕ ರದ್ದು ಮಾಡುವ ವಿಚಾರದಲ್ಲಿ ಒಂದು ಉಪ ಸಮಿತಿಯನ್ನು ಮಾಡುತ್ತೇವೆಂದು ಹೇಳಿದ್ದಿರಿ. ಆ ರೀತಿ ಮಾಡಿದ್ದರೆ ಅದು ವರದಿ ಕೊಟ್ಟಿದೆಯೇ? ಅದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹೀಗಿರುವಾಗ ಮತ್ತೆ ನಿಮ್ಮ ಸರ್ಕಾರದವರು ಎರಡು ಕಾಲೇಜುಗಳಿಗೆ ಅನುಮತಿ ಕೊಡುವುದಾಗಿ ಹೇಳಿದ್ದಾರೆ. ಹಿಂದಿನ ಸರ್ಕಾರದವರು ಬೀದಿ ಬೀದಿಗೆ, ರಸ್ತೆ ರಸ್ತೆಗೆ ಕಾಲೇಜುಗಳನ್ನು ಕೊಟ್ಟರು. ಹೆಜ್ಜೆ ಹೆಜ್ಜೆಗೆ ಸೀಟುಗಳನ್ನು ಮಾರಾಟ ಮಾಡಿದರು ಕಳೆದ ಹತ್ತು ವರ್ಷಗಳಲ್ಲಿ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ನಡೆದಿರುವಂಥ ಭ್ರಷ್ಟಾಚಾರದ ಬಗ್ಗೆ ನಿಮ್ಮ ಸರ್ಕಾರಕ್ಕೆ ಪ್ರಾಮಾಣಿಕತೆ ಇದ್ದರೆ ಉನ್ನತ ಮಟ್ಟದಲ್ಲಿರುವ ಸೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಿ ಆ ರೀತಿ ಮಾಡಿದರೆ ಈ ಕಾಯಿದೆ ಪ್ರಕಾರ ನಿಮ್ಮ ಸ್ನೇಹಿತರು ಹಾಗೂ ನಮಗೆ ಬಹಳ ಗೊತ್ತಿರುವವರು ಹಾಗೂ ನೋಡಿರುವವರೆಲ್ಲಾ ಜೈಲಿಗೆ ಹೋಗಬೇಕಾಗುತ್ತದೆ. ತಾವು ಪ್ರಾಮಾಣಿಕವಾದ ಉತ್ತರವನ್ನು ಈ ಬಗ್ಗೆ ಕೊಡಬೇಕು, ಈಗ ಕೊಟ್ಟಿರುವ ಉತ್ತರದಿಂದ ನನಗೆ ಸಮಾಧಾನ ಆಗಿಲ್ಲ.

ಶ್ರೀಮತಿ ಮನೋರಮಾ ಮಧ್ವರಾಜ್.— ಶ್ರೀ ಮಾನ್ ವಾಟಾಳ್ ನಾಗರಾಜ್ ಅವರಿಗೆ ಸಮಾಧಾನವಾಗುವಂಥ ಉತ್ತರ ಕೊಡುವುದಕ್ಕೆ ನನ್ನ ಹತ್ತಿರ ಸತ್ಯಕ್ಕೆ ಇಲ್ಲ. ನಾವು ಚುನಾವಣೆ ಪ್ರಣಾಳಿಕೆಯಲ್ಲಿ ಇದನ್ನು ನಿಷೇಧ ಮಾಡುತ್ತೇವೆಂದು ಘೋಷಿಸಿದ್ದೇವೆ ಇವತ್ತು ಅದಕ್ಕಾಗಿ ಕ್ಯಾಬಿನೆಟ್ ಸಬ್ ಕಮಿಟಿಯನ್ನು ಇದರ ಸಾಧಕ ಬಾಧಕಗಳನ್ನು ಕಂಡುಹಿಡಿಯಲು ರಚನೆ ಮಾಡಿದ್ದೇವೆ. ಈಗಾಗಲೆ ಸಮಿತಿ ಎರಡು ಸಿಟ್ಟಿಂಗ್ ಆಗಿದೆ ಇನ್ನೊಂದು ಸಿಟ್ಟಿಂಗ್ ಆದಮೇಲೆ ಅಂತಿಮ ರೂಪುರೇಷೆ ಕೊಡುವುದರಲ್ಲಿದ್ದೇವೆ. ೫ ಲಕ್ಷ, ೩ ಲಕ್ಷ ಹೀಗೆ ಕ್ಯಾಪಿಟೇಷನ್ ಇದ್ದರೆ ಅದನ್ನು ಫಿಕ್ಸ್ ಮಾಡಿದೆಯಾ ಕೇಳಿದ್ದಾರೆ ಎಂದು ತಾವು ಹೇಳಿದಿರಿ. ಈ ಬಗ್ಗೆ ತಮ್ಮ ಹತ್ತಿರ ಇದ್ದರೆ ಅದನ್ನು ನನಗೆ ಕೊಟ್ಟರೆ ತನಿಖೆ ಮಾಡಿಸಿ, ಸೂಕ್ತ ಕ್ರಮ ಕೈಗೊಳ್ಳುವುದಕ್ಕೆ ತಯಾರಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಜಿಲ್ಲೆಯ ಭಾಗದ ಮೇಲೆ ಸತ್ಯ ಮಾಡಿ ಹೇಳುತ್ತೇನೆ ಇದು ನಿಮಗೆ ಗೊತ್ತಿಲ್ಲವೇ? ಹಣ ತೆಗೆದುಕೊಳ್ಳುವ ವಿಚಾರ ನಾನು ಹೇಳಬೇಕೆ? ನನಗೆ ಉತ್ತರ

ಕೊಡುವಂಥ ಉತ್ತರ ಸಧ್ಯಕ್ಕೆ ನನ್ನ ಹತ್ತಿರ ಇಲ್ಲವೆಂದು ಹೇಳಿದಿರಿ. ಈ ಬಗ್ಗೆ ನಿಮ್ಮನ್ನು ದೂಷಣೆ ಮಾಡುತ್ತಿಲ್ಲ. ನಿಮ್ಮ ಬಗ್ಗೆ ನಾನು ಬಹಳ ಗೌರವ ಇಟ್ಟುಕೊಂಡಿದ್ದೇನೆ. ಆದರೆ ಈ ಬಗ್ಗೆ ನಿಮ್ಮ ಸರ್ಕಾರದ ನೀತಿ ಏನು ? ಈಗ ಎರಡು ಸಿಟಿಂಗ್ ಕ್ಯಾಲಿತಿದ್ದೀವೆ ಎಂದು ಹೇಳಿದಿರಿ, ಏನು ಕಾಫಿ ಕುಡಿದಿರಾ, ತಿಂಡಿ ತಿಂದಿರಾ, ಏನು ತೀರ್ಮಾನ ತೆಗೆದುಕೊಂಡಿರಿ. ಈಗಾಗಲೇ ಎಲ್ಲಾಕಡೆ ಶುರು ಆಗಿದೆ. ಇರಾನ್‌ನಿಂದ, ಇರಾಕ್‌ನಿಂದ, ಮಲೇಷಿಯಾದಿಂದ, ಎಲ್ಲಾಕಡೆಯಿಂದ ದಾಳಿಯಾಗುತ್ತಿದೆ, ಈ ಕಾಲೇಜು ನಡೆಸತಕ್ಕವರೆಲ್ಲರೂ ದುಡ್ಡಿನ ಕೊಳ್ಳೆ ಹೊಡೆಯುತ್ತಿದ್ದಾರೆ. ದರೋಡೆ ಮಾಡುತ್ತಿದ್ದಾರೆ, ರಾಬರಿ ಮಾಡುತ್ತಿದ್ದಾರೆ. ಲೂಟಿ ಮಾಡುತ್ತಿದ್ದಾರೆ. ಹಗಲುದರೋಡೆ ಮಾಡುತ್ತಿದ್ದಾರೆ. ಇದನ್ನ ಸಹಿಸಿಕೊಂಡು ಏತಕ್ಕೆ ಸುಮ್ಮನೆ ಕುಳಿತುಕೊಂಡಿದ್ದೀರಿ. ದಯಮಾಡಿ ಇದರ ಬಗ್ಗೆ ಸರಿಯಾದ ಉತ್ತರವನ್ನು ಕೊಡಬೇಕು. ಬರೀ ಸಿಟಿಂಗ್, ಸಿಟಿಂಗ್ ಅಂದರೆ ಬರೀ ಸಿಟಿಂಗೇ ಆಗುತ್ತದೆ. ಇದು ಸರಿಯಾದುಂಥ ನೀತಿ ಅಲ್ಲ. ನಿಮ್ಮ ಸರ್ಕಾರದ ಸೀಟುಗಳೆಷ್ಟು, ಅವರಿಗೆ ಕೊಟ್ಟಿರತಕ್ಕ ಸೀಟುಗಳೆಷ್ಟು ? ಎಷ್ಟೆಷ್ಟು ವ್ಯವಹಾರವಾಗಿದೆ, ಇದಕ್ಕೆ ರೀತಿ ನೀತಿ ಏನೂ ಬೇಡವೇ? ಸರ್ಕಾರಕ್ಕೆ ಕಣ್ಣಿಲ್ಲ ಇದ್ದರೆ ನೋಡಿ ಕಣ್ಣಿಲ್ಲದೇ ಇದ್ದರೆ ಬಿಡಿ. ಕಣ್ಣಿಲ್ಲ ಇದ್ದರೂ ಕಣ್ಣಿಲ್ಲದ ಹಾಗೆ, ಕಿವಿ ಇದ್ದರೂ ಕಿವಿ ಇಲ್ಲದ ಹಾಗೆ, ಹೃದಯ ಇದ್ದರೂ ಹೃದಯ ಇಲ್ಲದ ಹಾಗೆ ಮಾತನಾಡುವುದುಬೇಡ. ನಿಮ್ಮ ಮುಖ್ಯ ಮಂತ್ರಿಗಳು ಏನು ಹೇಳಿದರು ? ಅವರು ನಮ್ಮ ಪ್ರಣಾಳಿಕೆ ಖುರಾನ್, ಬೈಬಲ್ ಭಗವದ್ಗೀತೆ ಎಂದು ಹೇಳುತ್ತಾರೆ. ಆದರೆ ಇವೊತ್ತು ಲೂಟಿ ನಡೆಯುತ್ತಿದೆ. ಯಾವುದೇ ಬಡ ವಿದ್ಯಾರ್ಥಿಗಳಿಗೂ ಈ ರಾಜ್ಯದಲ್ಲಿ ವೈದ್ಯಕೀಯ ಸೀಟುಗಳು ಸಿಕ್ಕುವುದಿಲ್ಲ. ತಾಂತ್ರಿಕ ಶಿಕ್ಷಣದಲ್ಲಿ ಸೀಟುಗಳು ಸಿಕ್ಕುವುದಿಲ್ಲ. ಬಡವರ ಹೆಸರಿನಲ್ಲಿ ಪ್ರಾರಂಭವಾದ ಯಾವುದೇ ಮೆಡಿಕಲ್ ಕಾಲೇಜು, ತಾಂತ್ರಿಕ ಕಾಲೇಜುಗಳಲ್ಲಿಯೂ ಬಡಮಕ್ಕಳಿಗೆ ಸೀಟುಗಳು ಸಿಕ್ಕುವುದಿಲ್ಲ. ಎಲ್ಲಾ ಹೊರಗಡೆಯವರೇ ಇಲ್ಲಿಗೆ ಬಂದು ಸೀಟುಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಎಂ. ಎಸ್. ರಾಮಯ್ಯ ಕಾಲೇಜಿನಲ್ಲಿ ನೋಡಿದರೆ ಪ್ರತಿದಿವಸ ಬೇರೆ ಬೇರೆ ಭಾಷೆಯವರು ಸಿಕ್ಕುತ್ತಾರೆ. ಇದೇ ರೀತಿಯಲ್ಲಿ ಎಲ್ಲಾ ಕಾಲೇಜುಗಳಲ್ಲಿಯೂ ಸಹ ನಡೆಯುತ್ತಿದೆ. ಇದರ ಬಗ್ಗೆ ತಾವು ಗಮನ ಹರಿಸಬೇಕು.

ಉಪಾಧ್ಯಕ್ಷರು,—ಇದು ಗಮನಕ್ಕೆಯಿಯುವ ಸೂಚನೆ.

ಶ್ರೀ ಎಂ. ಮಹದೇವ್.—ಯಾರೋ ಮಾಡಿದ ತಪ್ಪಿಗೆ ಈ ಸರ್ಕಾರವನ್ನು ಏತಕ್ಕೆ ಗುರಿ ಮಾಡುತ್ತೀರಿ. ತಪ್ಪು ಸರಿ ಮಾಡಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಸರ್ಕಾರದ ಮೇಲೆ ನೇರವಾಗಿ ಆರೋಪಣೆ ಮಾಡುವುದು ಸರಿಯಾಗಿ ಕಾಣುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ನಾನು ವೀರೇಂದ್ರಪಾಟೀಲರ ಸರ್ಕಾರ ಎಂದು ಹೇಳಲಿಲ್ಲ. ರಾಮಕೃಷ್ಣ ಹೆಗಡೆಯವರ ಸರ್ಕಾರ ಇದರಲ್ಲಿ ಮಾಡಬಾರದ ಅನಾಹುತ ಹಾಗೂ ಅನ್ಯಾಯವನ್ನು ಮಾಡಿದೆ. ಈ ಒಂದು ಭ್ರಷ್ಟಾಚಾರದಲ್ಲಿ ಅವರು ಮಾಡಿದ್ದನ್ನೇ ಮಾಡಿ ಅವರ ರೈಲನ್ನೆ ನೀವು ಹತ್ತಿ ಹೋಗುತ್ತಿದ್ದೀರಿ ಈಗ ತಾವು ಅಧಿಕಾರಕ್ಕೆ ಬಂದು ಆರು ತಿಂಗಳುಗಳು ಆಗುತ್ತಾ ಬಂತು, ತಾವು ಏನು ಬದಲಾವಣೆಯನ್ನು ತೋರಿಸಿದ್ದೀರಿ, ಹೇಳಿ.

ಶ್ರೀಮತಿ ಮನೋರಮಾ ಮಧ್ವರಾಜ್.—ಈಗ ಪ್ರವೇಶವನ್ನು ಬಯಸಿ ಹೋಗುವಂಥ ವಿದ್ಯಾರ್ಥಿಗಳ ತಂದೆತಾಯಿಗಳು ನಮಗೆ ಈ ತರಹ ತೊಂದರೆಯಾಗುತ್ತಿದೆ, ಹಣ ಲೂಟಿ ಮಾಡುತ್ತಿದ್ದಾರೆ. ಇಂತಹ ಸುಲಿಗೆ ಮಾಡುತ್ತಿದ್ದಾರೆಂದು ಕಂಪ್ಲೆಂಟ್ ಕೊಟ್ಟರೆ ನಾವು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇವೆ. ಈ ರೀತಿ ವಿತ್‌ಔಟ್ ರಿಕಾರ್ಡ್ಸ್ ಒಟ್ಟಾಗಿ ಮಾತನಾಡಿದರೆ, ನನಗೆ ಉತ್ತರ ಕೊಡಲು ಬಹಳ ಕಷ್ಟವಾಗುತ್ತದೆ.

ಶ್ರೀ ವಾಟಾಳ್ ನಾಗರಾಜು.—ಇದು ಸರ್ವೋಚ್ಚ, ಸಾರ್ವಭೌಮತ್ವ ಪಡೆದಂಥ ಸಭೆ, ಇಲ್ಲಿ ತಪ್ಪಾಗಿ ಹೇಳುತ್ತಿದ್ದೇನೆ. ೨ ಲಕ್ಷ ರೂಪಾಯಿ, ೩ ಲಕ್ಷ ರೂಪಾಯಿ, ೫, ಲಕ್ಷ ರೂಪಾಯಿ ಹೀಗೆ ಪ್ರತಿಯೊಬ್ಬ ವಿದ್ಯಾರ್ಥಿಯಿಂದಲೂ ಹಣ ತೆಗೆದುಕೊಳ್ಳುತ್ತಿದ್ದಾರೆ. ಈ ಕಂಪೇಂಟ್‌ಗಿಂತಲೂ ತಮಗೆ ಇನ್ನಾವ ಕಂಪ್ಲೆಂಟ್ ಬೇಕು. ಇದು ಸಾರ್ವಜನಿಕ ಸಭೆ ನಮ್ಮ ರಾಜ್ಯದ ಕನ್ನಡ ವಿದ್ಯಾರ್ಥಿಗಳಿಗೆ ಅನ್ಯಾಯ ಅಕ್ರಮಗಳಾಗುತ್ತಿವೆ. ಬಡ ವಿದ್ಯಾರ್ಥಿಗಳಿಗೆ, ಹಳ್ಳಿಯ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕಾಲೇಜುಗಳಿಗೆ ಬರುವ ಹಾಗೆ ಆಲ್ಲ. ಇಂಜಿನಿಯರಿಂಗ್ ಕಾಲೇಜುಗಳಿಗೆ ಬರುವ ಹಾಗೆ ಇಲ್ಲ ಎಲ್ಲ ಹೊರಗಡೆಯವರೇ ಬರುತ್ತಿದ್ದಾರೆ, ಈಗ ಏನು ಲೂಟಿ ಆಗುತ್ತಿದೆ ಅದನ್ನು ನಿಲ್ಲಿಸುತ್ತೇವೆಂದು ಹೇಳುತ್ತೀರಾ ? ಈ ಕಾಲೇಜುಗಳ ಮೇಲೆ ಸರಿಯಾದ ತನಿಖೆ ಮಾಡುತ್ತೀರಾ ? ತಾವು ನ್ಯಾಯಾಂಗ ತನಿಖೆ ಮಾಡುತ್ತೇವೆಂದು ಹೇಳಬೇಕು.

ಶ್ರೀಮತಿ ಮನೋರಮಾ ಮಾಧ್ವರಾಜ್.—ಸಂಪುಟದ ಸಭೆಯಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ನಾವು ಬರುತ್ತೇವೆ.

ಶ್ರೀ ವಾಟಾಳ್ ನಾಗರಾಜ್ —ಅಧ್ಯಕ್ಷರೆ, ಇದು ಸರಿಯಲ್ಲ, ತಾವು ದಾವಣಗೆರೆಯಲ್ಲಿದ್ದವರು, ಅಲ್ಲಿದ್ದ ಕಾಲೇಜುಗಳನ್ನು ನೋಡಿದ್ದೀರಿ. ಮೈಸೂರು, ಬೆಂಗಳೂರು ಕಾಲೇಜುಗಳನ್ನು ನೋಡಿದ್ದೀರಿ. ರಾಜಕೀಯ ಪ್ರಭಾವ ಪಡೆದವರ ಮತ್ತು ಜಾತಿ ಪ್ರಭಾವ ಪಡೆದವರ ಕಾಲೇಜುಗಳೇ ಆಗಿವೆ. ಇಂತಹ ಕಾಲೇಜುಗಳು ಬೇಡ. ಇವು ಬಡವರನ್ನು ಶೋಷಣೆ ಮಾಡುತ್ತವೆ. ಬಡಮಕ್ಕಳ ಶೋಷಣೆಯಾಗುತ್ತದೆ. ಕನ್ವಡಿಗರ ಶೋಷಣೆಯಾಗುತ್ತದೆ. ಇದು ಸರಿಯಲ್ಲ ಬಡ ಮಕ್ಕಳಿಗೆ ಬಹಳ ಅನ್ಯಾಯವಾಗುತ್ತದೆ ಇಂತಹ ಕಾಲೇಜುಗಳು ಬೇಡ ಎಂದು ಹೇಳಿ, ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

(ಗೊಂದಲ)

ಉಪಾಧ್ಯಕ್ಷರು.—ದಯವಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಎಂ. ನಾರಾಯಣಸ್ವಾಮಿ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವೀ ಪೂರ್ವ ಕಾಲೇಜಿನಲ್ಲಿ ಮಾರ್ಚ್ ೧೯೮೯ರ ಅಕ್ಟೋಬರ್ ೧೯೮೯ರ ಪರೀಕ್ಷಾ ಕೇಂದ್ರಗಳಲ್ಲಿ ಕೆಲಸ ಮಾಡಿದಂತಹ ಮೌಲ್ಯಮಾಪಕರ ಸಂಭಾವನೆಯನ್ನು ಕೊಡದೇ ಇರುವುದು,

ಶ್ರೀ ರುಕ್ಮಯ್ಯ ಪೂಜಾರಿ.— ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಪದವಿಪೂರ್ವ ಕಾಲೇಜಿನಲ್ಲಿ ೧೯೮೯ ಮಾರ್ಚ್ ಮತ್ತು ೮೯ ಅಕ್ಟೋಬರ್‌ನಲ್ಲಿ ಪರೀಕ್ಷಾ ಕೇಂದ್ರಗಳಲ್ಲಿ ಮೌಲ್ಯಮಾಪಕರಾಗಿ ಕೆಲಸ ಮಾಡಿದಂತಹ ಅಧ್ಯಾಪಕರುಗಳಿಗೆ ಕೊಡಬೇಕಾಗಿದ್ದ ಸಂಭಾವನೆ ಹಣವನ್ನು ಇವತ್ತಿನವರೆಗೆ ಕೊಟ್ಟಿರುವುದಿಲ್ಲ. ಮತ್ತು ವಿಟ್ಲ ಪದವಿ ಪೂರ್ವ ಕಾಲೇಜಿನಲ್ಲಿ ದುಡಿಯುತ್ತಿರುವ ಶ್ರೀ ಪಿ. ಕೃಷ್ಣಶಿಥಿಲಾಯರವರು ೮೯ರ ಅಕ್ಟೋಬರ್‌ನಲ್ಲಿ ವಿವೇಕಾನಂದ ಕಾಲೇಜು ಪುತ್ತೂರುನಲ್ಲಿ ನಡೆದ ಪರೀಕ್ಷಾ ಸಂದರ್ಭದಲ್ಲಿ ಕಸ್ಟೋಡಿಯನ್ ಆಗಿ ಕೆಲಸ ಮಾಡಿರುವುದರ ಟಿ.ಎ. ಬಿಲ್ಲು ಕೂಡ ಪಾವತಿಯಾಗಿರುವುದಿಲ್ಲ ಎಂಬುದಾಗಿ ಸರಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.— ಇದಕ್ಕೆ ಹೇಳಿಕೆ ಕೊಡಬೇಕಾದುದೇನೂ ಇಲ್ಲ. ಮಾನ್ಯ ಸದಸ್ಯರು ಹೇಳಿದ್ದಾರೆ. ಈ ಬಗ್ಗೆ. I take note of it.

೨) ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಿಂದ ಹೆರಿಗೆ ಭತ್ಯದ ಹಣ ದುರುಪಯೋಗ

ಶ್ರೀ ಜಿ. ರಾಜೂಗೌಡ.— ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಯಾದ ಶ್ರೀ ಬಸವರಾಜು ಅವರು ತಮ್ಮ ಸೇವೆಯ ಅವಧಿಯಲ್ಲಿ ಹೆರಿಗೆ ಭತ್ಯದ ಹಣದಲ್ಲಿ ಸುಮಾರು ೫೦,೦೦೦ ಕ್ಕಿಂತಲ್ಲೂ ಹೆಚ್ಚು ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಖಚಿತವಾಗಿ ತಿಳಿದು ಬಂದಿದೆ. ಯಾರಿಗೆ ಹೆರಿಗೆ ಭತ್ಯದ ಹಣವನ್ನು ಪಾವತಿ ಮಾಡಬೇಕು ಅವರ ಹೆಸರಿನ ಡಿ.ಡಿ.ಯನ್ನು ಪಡೆದು ಅವರಿಗೆ ಎತರಣೆ ಮಾಡಬೇಕೆಂಬ ಪದ್ಧತಿ ರೂಢಿಯಲ್ಲಿದ್ದರೂ ಸಹ ಅವರು ಇದನ್ನು ಕೈ ಬಿಟ್ಟು ಹಣವನ್ನು ಬಟವಾಡೆ ಮಾಡಿದ್ದಾರೆ. ಈ ರೀತಿಯಾಗಿ ಕೊಳ್ಳೇಗಾಲ ವಿಜಾನೆಯಿಂದ ಎ.ಸಿ. ಬಿಲ್ ಮುಖಾಂತರ ಲಕ್ಷಾಂತರ ರೂಪಾಯಿ ಹಣ ಪಡೆದು ಆದರಲ್ಲಿ ೫೦,೦೦೦ ಕ್ಕಿಂತ ಹೆಚ್ಚು ಹಣವನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಎರಡನೆಯದಾಗಿ ಕುಟುಂಬ ಕಲ್ಯಾಣ ಯೋಜನೆಯ ಕೆಳಗೆ ಕೈಗೊಳ್ಳುವ ಸಂತಾನ ಹರಣ ಶಸ್ತ್ರ ಚಿಕಿತ್ಸೆಯ ಹಣವನ್ನು ಪಡೆದು ಅದನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂಬುದಾಗಿ ತಿಳಿದು ಬಂದಿದೆ. ಇವರಿಗೆ ಕಾಡುಗೆರೆಯಿಂದ ಮಹದೇಶ್ವರ ಬೆಟ್ಟಕ್ಕೆ ವರ್ಗಾವಣೆ ಯಾಗಿದ್ದರೂ ಇವರ ಸ್ಥಳಕ್ಕೆ